# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ.572/2017

ಸಿಡಬ್ಲ್ಯೂ-9 ಪಿಡಬ್ಲ್ಯೂ-5

| | |
|---|---|
| ಹೆಸರುಃ | ಶ್ರೀ ಚೆನ್ನಪ್ಪ |
| ತಂದೆಯ ಹೆಸರುಃ | ಸುಭಾಷ ಬುಕ್ಕಪನೋರ |
| ವಯಸ್ಸುಃ | 50 ವರ್ಷ |
| ಉದ್ಯೋಗಃ | ಹೊಟೇಲ ಕೆಲಸ |
| ವಾಸ ಸ್ಥಳಃ | ಬಟಗೇರಾ (ಕೆ) ಗ್ರಾಮ |

ದಿನಾಂಕ 14-12-2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನನ್ನದು ಕುರಕುಂಟಾ ಕ್ರಾಸದಲ್ಲಿ ಒಂದು ಹೊಟೇಲ ಇರುತ್ತದೆ. ನಾನು ಸದರಿ ಹೊಟೇಲನ್ನು ಮುಂಜಾನೆ ಪ್ರಾರಂಭಿಸಿ ರಾತ್ರಿ 09.30 ರವರೆಗೆ ಕೆಲಸ ಮಾಡುತ್ತೇನೆ. ನಾನು ಕೊಡಂಗಲ್ ಸೇಡಂ ರಸ್ತೆಯ ಪಕ್ಕ ನಮ್ಮ ಮನೆಯ ಮುಂದೆ ಅಪಘಾತವಾಗಿದ್ದನು ನೋಡಿಲ್ಲ. ನಮ್ಮ ಮನೆಯ ಪಕ್ಕದ ಪಾಂಡುರಂಗ ವಡ್ಡರ ತೀರಿಕೊಂಡ ಕಾರಣ ನನಗೆ ಗೊತ್ತಿಲ್ಲ. ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿನಾಂಕ 09.06.2017 ರಂದು ರಾತ್ರಿ 08.25 ಗಂಟೆಗೆ ನಾನು ಹೊಟೇಲ ಮುಂದೆ ಕುಳಿತ್ತಿದ್ದಾಗ ನಮ್ಮ ಮನೆಯ ಪಕ್ಕದ ಪಾಂಡುರಂಗ ಇತ ಮೂತ್ರ ವಿಸರ್ಜನೆ ಮಾಡಿ ಮರಳಿ ಮನೆಗೆ ಬರುತ್ತಿರುವಾಗ ಕೊಡಂಗಲ್ ಕಡೆಯಿಂದ ಒಬ್ಬ ಮೊಟಾರ ಸೈಕಲ ನಂ.KA-32-EM-6545 ಅದರ ಚಾಲಕ ಅತೀ ಜೋರಿನಿಂದ ಮತ್ತು ನಿಷ್ಕಾಳಜೀತನದಿಂದ ಚಲಾಸಿಕೊಂಡು ಬಂದು ರೊಡನ್ನು ದಾಟುತ್ತಿದ್ದ ಪಾಂಡುರಂಗ ಇತನಿಗೆ ಡಿಕ್ಕಿಪಡಿಸಿರುತ್ತಾನೆ ಎಂದರೆ ನಾನು ನೋಡಿಲ್ಲ. ಹಾಗೇ ಡಿಕ್ಕಿಪಡಿಸಿ ಮೋಟಾರ ಸೈಕಲನ್ನು ನಿಲ್ಲಿಸದೇ ಓಡಿ ಹೋಗಿರುತ್ತಾನೆ ಎದರೆ ಸರಿಯಲ್ಲ. ಆಗ ನಾನು ಸದರಿ ಪಾಂಡುರಂಗ ಇವನ ಹತ್ತಿರ ಹೋಗಿ ನೋಡಿದ್ದು, ಅವರ ಎಡಗಾಲು, ಮೊಳಕಾಲು ಕೆಳಗಡೆ ಮುರಿದಿದ್ದು, ಬಲಹುಬ್ಬಿನ ಮೇಲೆ ತರಚಿದ ಗಾಯ, ಬಲಾಗಾಲಿನ ಮೊಳಕಾಲಿಗೆ ತರಚಿದ ಗಾಯವಾಗಿತ್ತು ಎಂದರೆ ಸರಿಯಲ್ಲ. ನಂತರ ಪಾಂಡುರಂಗ ಇತನನ್ನು 108 ವಾಹನದಲ್ಲಿ ಸೇಡಂ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಸೇರಿಕೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಂತರದಲ್ಲಿ ಪಾಂಡುರಂಗ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ

ಪಡೆಯುತ್ತಿರುವಾಗ 10.06.2017 ರಂದು 03.15 ಗಂಟೆಗೆ ತೀರಿಕೊಂಡಿರುತ್ತಾನೆ ಅಂತಾ ವಿಷಯ ಗೊತ್ತಾಯಿತು ಎಂದರೆ ಸರಿಯಲ್ಲ. ಹೀಗೆ ನಾನು ಪೊಲೀಸರ ಮುಂದೆ ದಿನಾಂಕ 10.06.2017 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಆರ್. ಬಿ. ಆರೋಪಿ ಪರ ವಕೀಲರಿಂದ**

ಏನು ಇಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ.ದ.ನ್ಯಾದಂ.ಸೇಡಂ.

*SYH